2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು,
ವಿಜಯಪೂರ ಇವರ ನ್ಯಾಯಾಲಯ

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.17/2020
ಪಿ.ಡಬ್ಲೂ.18
ಸಿ.ಡಬ್ಲೂ.15

| | | |
|---|---|---|
| ಸಾಕ್ಷಿದಾರರ ಹೆಸರು | : | ಶಂಕರಪ್ಪ ದೊಡ್ಡಮನಿ |
| ತಂದೆಯ ಹೆಸರು | : | ರಾಮಪ್ಪ |
| ವಯಸ್ಸು | : | 47 ವರ್ಷ. |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ದೇವಾಪುರ. |

ಇಂದು ದಿನಾಂಕ 13-09-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1) ನನಗೆ ಮೃತ ಚಾಸಾ-1 ನಾಗವ್ವ, ಚಾಸಾ-12 ಸರಸ್ವತಿ, ಚಾಸಾ-13 ಶಂಕರ ಇವರ ಪರಿಚಯ ಇಲ್ಲ. ಚಾಸಾ-14 ಲಕ್ಷ್ಮಿಬಾಯಿ ನನ್ನ ಹೆಂಡತಿ. ಚಾಸಾ-16 ಶಾಸಪ್ಪ ನನ್ನ ಅಣ್ಣ. ಚಾಸಾ-17 ಪಾಂಡಪ್ಪ ನನ್ನ ಅಣ್ಣ. ಚಾಸಾ-18 ರಿಂದ 22 ಇವರ ಪರಿಚಯ ಇದೆ. ನ್ಯಾಯಾಲಯದ ಮುಂದೆ ಇರುವ 1 ರಿಂದ 5 ನೇ ಆರೋಪಿತರ ಮತ್ತು ಈ ದಿನ ಗೈರು ಹಾಜರು ಉಳಿದಿರುವ 6 ನೇ ಆರೋಪಿತರ ಪರಿಚಯ ಇಲ್ಲ.

2) 1 ನೇ ಆರೋಪಿ ಮತ್ತು ಮೃತ ಚಾಸಾ-1 ಇವರ ಸಂಬಂಧ ನನಗೆ ಗೊತ್ತಿಲ್ಲ. ಚಾಸಾ-1 ನಾಗವ್ವ ಈಗ ಜೀವಂತ ಇಲ್ಲ. ಆಕೆ ಸತ್ತಿದ್ದಾಳೆ ಅಂತಾ ನನಗೆ ಗೊತ್ತಿದೆ. ಆಕೆ ಹೇಗೆ, ಎಲ್ಲಿ ತೀರಿಕೊಂಡಿದ್ದಾಳೆ ಅಂತಾ ನನಗೆ ಗೊತ್ತಿಲ್ಲ. ಆಕೆಯನ್ನು ಯಾರು, ಯಾವ ಉದ್ದೇಶಕ್ಕಾಗಿ ಕೊಲೆ ಮಾಡಿದ್ದಾರೆ ಅಂತಾ ಗೊತ್ತಿಲ್ಲ. ಎಲ್ಲಾ ಆರೋಪಿತರು ಪ್ಲಾಟ ಸಂಬಂಧ ಚಾಸಾ-1 ಇವರನ್ನು ಪೆಟ್ರೂಲ್ ಹಾಕಿ ಸುಟ್ಟಿದ್ದನ್ನು ನಾನು ನೋಡಿಲ್ಲ. ಪೊಲೀಸರಿಗೆ ಹೇಳಿಕೆ ಮತ್ತು ಮರು ಹೇಳಿಕೆಗಳನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ತಾನು ನೀಡಿದ ಹೇಳಿಕೆ ಮತ್ತು ಮರು ಹೇಳಿಕೆಗಳು ವಿರುದ್ಧವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ:

1) ಮೃತ ನಾಗವ್ವ, ಪ್ರತಿಕ್ಷಾ, ಸರಸ್ವತಿ ಆಕೆಯ ಗಂಡ ಸೇರಿ ದೇವಲಾಪುರ ಗ್ರಾಮದಲ್ಲಿ ಈರಪ್ಪ ಚಲುವಾದಿ ಇವರ ಮನೆಯಲ್ಲಿ ಬಾಡಿಗೆಗೆ ಇದ್ದರು ಅಂದರೆ ಸರಿಯಲ್ಲ.

2) ನಾಗಮ್ಮ ಸುಭಾಶ ಅನ್ನುವು ವ್ಯಕ್ತಿಯ ಜೊತೆ ಆಗಿತ್ತು ಅನ್ನುವುದು ಗೊತ್ತಿಲ್ಲ. ಅವರು ಮಂಗಳೂರಿಗೆ ಹೋಗಿದ್ದರು ಅಂದರೆ ಗೊತ್ತಿಲ್ಲ. ಅಲ್ಲಿ ಅವರಿಬ್ಬರ ನಡುವೆ ವೈಮನಸ್ಸು ಬಂದು ಅವಳ ಗಂಡ ಮೊದಲನೇ ಮಗಳು ಲಕ್ಷ್ಮಿಯನ್ನು ಕರೆದುಕೊಂಡು ಆಕೆಯನ್ನು ಬಿಟ್ಟು ಹೊಗಿದ್ದ ಅಂದರೆ ಸರಿಯಲ್ಲ. ನಂತರ ಆಕೆಗೆ 6 ನೇ ಆರೋಪಿ ಜೊತೆ ಸಲುಗೆ ಬೆಳದಿತ್ತು ಅಂದರೆ ಸರಿಯಲ್ಲ. ಮೃತ ನಾಗವ್ವಳಿಗೆ 1 ನೇ ಆರೋಪಿ 2017 ನೇ ಸಾಲಿನಲ್ಲಿ ಕುಲ್ಯಾಳದಲ್ಲಿ ಒಂದು ಪ್ಲಾಟ ಇದೆ ಅದನ್ನು ತೆಗೆದುಕೊ ಅಂತಾ ಹೇಳಿದ್ದಳು ಅಂದರೆ ಗೊತ್ತಿಲ್ಲ. ಆ ಪ್ಲಾಟ ತೆಗೆದುಕೊಳ್ಳುವ ಸಂಬಂಧ ನಾಗಮ್ಮ 1 ನೇ ಆರೋಪಿಗೆ ರೂ. 60,000/-ಗಳನ್ನು ನೀಡಿದ್ದಳು ಅಂದರೆ ಸರಿಯಲ್ಲ. ನಂತರ ಚಾಸಾ-13 ಪ್ಲಾಟನ್ನು ನೋಡಿ ಇದು ಮುಳಗಡೆ ಪ್ರದೇಶದಲ್ಲಿ ಇರುವುದರಿಂದ ಅದನ್ನು ತೆಗೆದುಕೊಳ್ಳಲು ಆಗುವುದಿಲ್ಲ ಹಣವನ್ನು ವಾಪಸು ಪಡೆ ಅಂತಾ ಹೇಳಿದ್ದ ಅಂದರೆ ಸರಿಯಲ್ಲ. ಈ ಕಾರಣಕ್ಕಾಗಿ ಮೃತ ನಾಗಮ್ಮ 1 ನೇ ಆರೋಪಿ ಹತ್ತಿರ ಹಣವನ್ನು ವಾಪಸು ಕೆಳಿದ್ದಳು ಅಂದರೆ ಸರಿಯಲ್ಲ. ಆಗ 1 ನೇ ಆರೋಪಿ ಹಣವನ್ನು ವಾಪಸು ಕೊಡುವುದಿಲ್ಲ ಬೇಕಾದರೆ ಬೇರೆ ಪ್ಲಾಟ ಕೊಡಿಸುತ್ತೇನೆ ಅಂತಾ ಹೇಳಿದ್ದಳು ಅಂದರೆ ಸರಿಯಲ್ಲ. ಮುಂದುವರೆದು ಹಣವನ್ನು ಕೇಳಿ ಕಿರಿಕಿರಿ ಮಾಡಿದರೆ ಜೀವ ಸಹಿತ ಬಿಡುವುದಿಲ್ಲ

ಅಂತಾ ಜೀವ ಬೆದರಿಕೆ ಹಾಕಿದ್ದಳು ಅಂದರೆ ಸರಿಯಲ್ಲ. ಮುಂದೆ ನಾಗಮ್ಮ ಮತ್ತು ಚಾಸಾ-13 ಇವರಿಗೆ ಹಣವನ್ನು ವಾಪಸ್ಸು ಕೊಡು ಅಂತಾ ಗಲಗಲಿಗೆ ಹೋಗಿ ಕೇಳಿದಾಗ ಹಣವನ್ನು ವಾಪಸ್ಸು ಕೊಡುವುದಿಲ್ಲ ನೀನು ಏನೂ ಮಾಡಿಕೋತಿ ಮಾಡಿಕೋ ಅಂತಾ ಹೇಳಿದ್ದಳು ಅಂದರೆ ಸರಿಯಲ್ಲ. ಈ ವಿಷಯವನ್ನು ಮೃತ ನಾಗವ್ವ ಮತ್ತು ಚಾಸಾ-13 ಶಂಕರ ತಿಳಿಸಿದ್ದರು ಅಂದರೆ ಸರಿಯಲ್ಲ. ಆಗ ನಾಗವ್ವ ಠಾಣೆಯಲ್ಲಿ ಫಿರ್ಯಾದು ನೀಡುತ್ತೇನೆ ಅಂತಾ ಹೇಳಿದ್ದಳು ಅಂದರೆ ಸರಿಯಲ್ಲ. ಆಗ 1 ನೇ ಆರೋಪಿ ನೀನು ಬದುಕಿದ್ದರೆ ಫಿರ್ಯಾದು ಕೊಡುತ್ತಿಯಾ ಅಷ್ಟರೊಳಗೆ ನಿನ್ನನ್ನು ಖಲ್ಲಾಸ ಮಾಡುತ್ತೇವೆ ಅಂತಾ ಬೆದರಿಕೆ ಹಾಕಿದ್ದಳು ಅನ್ನುವ ವಿಷಯ ನಾಗವ್ವಳಿಂದ ಗೊತ್ತಾಗಿತ್ತು ಅಂದರೆ ಸರಿಯಲ್ಲ.

3) ನಾನು ದಿನಾಂಕ: 30-12-2019 ರಂದು ಸಂಜೆ 6-30 ರ ಸಮಯದಲ್ಲಿ ನಮ್ಮ ಮನೆಯಲ್ಲಿ ಇದ್ದಾಗ ಚಾಸಾ-1 ಇವರ ಮನೆಯಲ್ಲಿ ಕಿರಿಚಾಡುವ ಶಬ್ದ ಕೇಳಿತ್ತು ಅಂದರೆ ಸರಿಯಲ್ಲ. ಅಲ್ಲಿ ನಾನು ನನ್ನ ಹೆಂಡತಿ ಮತ್ತು ಅಜುಬಾಜು ಮನೆಯವರು ಹೋಗಿ ನೋಡಲಾಗಿ ಚಾಸಾ-13, ಪ್ರತಿಕ್ಷಾ ಮತ್ತು ಚಾಸಾ-12 ಮತ್ತು ಅಕ್ಕಪಕ್ಕದ ಮನೆಯವರು ಬಂದಿದ್ದರು ಅಂದರೆ ಸರಿಯಲ್ಲ. ನಮ್ಮನ್ನು ನೋಡಿ 1 ರಿಂದ 5 ನೇ ಆರೋಪಿತರು ಓಡಿ ಹೋದರು ಅಂದರೆ ಸರಿಯಲ್ಲ. ಒಳಗಿನಿಂದ ಚಾಸಾ-1 ಮತ್ತು 6 ನೇ ಆರೋಪಿ ಬೆಂಕಿ ಹತ್ತಿಕೊಂಡು ಚೀರಾಡುತ್ತಾ ಹೊರಗಡೆ ಬಂದಿದ್ದರು ಅಂದರೆ ಸರಿಯಲ್ಲ. ಚಾಸಾ-1 ಇವರಿಗೆ ಬೆಂಕಿ ಹತ್ತಿದ್ದರಿಂದ ಮೈಮೇಲೆ ಇದ್ದ ಸೀರೆ, ಜಂಪರ, ಫರಕಾರ ಸುಟ್ಟು ಹೋಗಿತ್ತು ಅಂದರೆ ಸರಿಯಲ್ಲ. ಮುಂದೆ ನಾವು ಎಲ್ಲರೂ ಸೇರಿ ಚಾಸಾ-1 ಇವರನ್ನು ದುರ್ಗವ್ವನ ಗುಡಿಯ ಮುಂದೆ ಹೋಗಿದ್ದೆವು ಅಂದರೆ ಸರಿಯಲ್ಲ. 6 ನೇ ಆರೋಪಿತ ಕಾಲಿಗೆ ಸ್ವಲ್ಪ ಬೆಂಕಿ ಹತ್ತಿತ್ತು ಆತ ಓಡಿ ಹೋದ ಅಂದರೆ ಸರಿಯಲ್ಲ. ಚಾಸಾ-1 ಇವರಿಗೆ ಎದೆಯಿಂದ ಕೆಳಗೆ, ಕೈಗೆ, ಕಾಲಿಗೆ ಸುಟ್ಟು ಗಾಯಗಳನ್ನು ಆಗಿದ್ದರು ಅವಳನ್ನು 108 ಅಂಬ್ಯುಲನ್ಸನಲ್ಲಿ

ವಿಜಯಪುರದ ವೇದಾಂತ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಅಂತಾ ಕೇಳಿ ಗೊತ್ತಾಯಿತು ಅಂದರೆ ಸರಿಯಲ್ಲ. ನಾನು ನಾಗಮ್ಮಳನ್ನು ವಿಚಾರಿಸಲಾಗಿ ಚಾಸಾ-12 ಚೂಡಾ ಮಾಡಲು ಬುಟ್ಟಿ ತರಲು ಹೋದಾಗ 1 ರಿಂದ 6 ನೇ ಆರೋಪಿ ಒಮ್ಮೆಲೆ ಮನೆಗೆ ಬಂದರು ಬಂದು 6 ನೇ ಆರೋಪಿ ನೀನು ನನ್ನ ಜೊತೆ ಬಾ ಅಂತಾ ಕರೆದಿದ್ದ ಆಗ 1 ಮತ್ತು 2 ನೇ ಆರೋಪಿತರು ನೀನು ಆರೋಪಿ ನಂ. 6 ರ ಜೊತೆ ಹೋಗು ಚಾಸಾ-13 ಇವರನ್ನು ಬಿಟ್ಟು ಬಿಡು ನೀನು ಪ್ಲಾಟಿಗೆ ಕೊಟ್ಟ ದೊಡ್ಡನ್ನು ವಾಪಸ್ಸು ಕೊಡುತ್ತೇವೆ ಅಂದರು ಆಗ ನಾಗವ್ವ ಚಾಸಾ-13 ಇವರನ್ನು ಬಿಟ್ಟು ಬರುವುದಿಲ್ಲ ನೀವು ದುಡ್ಡು ಕೊಡದಿದ್ದರೇ ಚಾಸಾ-13 ರಿಂದ ಹೊಡಿಸುತ್ತೇನೆ ಅಂತಾ ಹೇಳಿದ್ದಳು ಆಗ ಅವರ ನಡುವೆ ಬಾಯಿ ಬಾಯಿ ನಡೆದಿತ್ತು ಆಗ 1 ಮತ್ತು 2 ನೇ ಆರೋಪಿ ಈಕೆ ನಮ್ಮ ಮಾತು ಕೇಳುವುದಿಲ್ಲ ಹಾದರ ಮಾಡುವುದು ಬಿಡುವುದಿಲ್ಲ ಇಕೆಯನ್ನು ಖಲಾಸ ಮಾಡಿ ಬೀಡೋಣ ಮುಂದೆ ಯಾರು ದುಡ್ಡು ಕೇಳುವುದಿಲ್ಲ ಅಂತಾ ಹೇಳಿದಾಗ ಆಗ 3 ರಿಂದ 5 ನೇ ಆರೋಪಿತರು ನಾಗವ್ವಳನ್ನು ಗಟ್ಟಿಯಾಗಿ ಹಿಡಿದಿದ್ದರು ಮತ್ತು 1 ಮತ್ತು 2 ನೇ ಆರೋಪಿತರು ತಲಾ 2 ಲಿಟರ್ ಬಾಟಲಿಯಲ್ಲಿ ಇದ್ದ 4 ಲಿಟರ್ ಪೆಟ್ರೋಲನ್ನು ತನ್ನ ಮೇಲೆ ಸುರಿದಿದ್ದರು, ನಂತರ ಅವರು 6 ನೇ ಆರೋಪಿತನಿಗೆ ನಿನ್ನ ಜೊತೆ ಬಂದರೆ ಇವಳನ್ನು ಕರೆದುಕೊಂಡು ಬಾ ಇಲ್ಲದಿದ್ದರೆ ಬೆಂಕಿ ಹಚ್ಚಿಸುಟ್ಟು ಬಿಡು ಅಂತಾ ಹೇಳಿ ಮನೆ ಹೊರಗೆಡೆ ನಿಂತಿದ್ದರು, ನಂತರ 6 ನೇ ಆರೋಪಿ ಕೊನೆಯ ಸಲು ಕೇಳುತ್ತೇನೆ ನೀನು ನನ್ನ ಜೊತೆ ಬಂದು ಬಿಡು ಅಂತಾ ಹೇಳಿದಾಗ ನಾಗವ್ವ ಬರುವುದಿಲ್ಲ ಅಂತಾ ಹೇಳಿದ್ದಕ್ಕೆ ಆತ ಸಿಟ್ಟು ಮಾಡಿಕೊಂಡು ತನ್ನ ಹತ್ತಿರ ಇದ್ದ ಬೆಂಕಿ ಪೊಟ್ಟಣದಿಂದ ಕಡ್ಡಿ ಗೀರಿ ಬೆಂಕಿ ಹಚ್ಚಿದ್ದ ಅದು ಆತನಿಗೂ ಕೂಡಾ ಹತ್ತಿತ್ತು, ನಾವು ಚೀರಾಡುತ್ತಾ ಹೊರಗಡೆ ಬಂದೆವು ನೀವು ಎಲ್ಲಾ ಬಂದು ನಮ್ಮ ಪ್ರಾಣ ಉಳಿಸಿದ್ದಿರಿ ಅಂತಾ ಹೇಳಿದ್ದಳು ಅಂದರೆ ಸರಿಯಲ್ಲ. ಈ ಕುರಿತಂತೆ ಈಗ ಓದಿ ಹೇಳಿದಂತೆ "ನಾನು ಮೇಲಿನ ವಿಳಾಸದ_ _ _ _ _ _

ಕೇಳಿ ಗೊತ್ತಾಯಿತು" ಅಂತಾ ದಿನಾಂಕ: 01-01-2020 ರಂದು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೆ ಅಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿ.ಪಿ.-47 ಅಂತಾ ಗುರುತಿಸಲಾಯಿತು.

4) ಈ ಘಟನೆಯ ವಿಷಯ ಕುರಿತಂತೆ ನಾನು ಪೋಲಿಸರ ಮುಂದೆ ದಿನಾಂಕ: 12-01-2020 ರಂದು ಈಗ ಓದಿ ಹೇಳಿದಂತೆ "ನಾನು ದಿನಾಂಕ: 01-01-2020 _ _ _ _ _ _ _ _ _ ಕೇಳಿ ತಿಳಿದುಕೊಂಡೆನು" ಅಂತಾ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.-47 ಅಂತಾ ಗುರುತಿಸಲಾಯಿತು.

5) ಈ ಘಟನೆಯ ವಿಷಯ ಕುರಿತಂತೆ ನಾನು ಪೋಲಿಸರ ಮುಂದೆ ದಿನಾಂಕ: 28-03-2020 ರಂದು 6 ನೇ ಆರೋಪಿಯನ್ನು ಠಾಣೆಯಲ್ಲಿ ಗುರುತಿಸಿ ಈಗ ಓದಿ ಹೇಳಿದಂತೆ "ಈ ದಿವಸ _ _ _ _ _ _ _ _ _ ಕೇಳಿಗೊತ್ತಾಯಿತು" ಅಂತಾ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.-49 ಅಂತಾ ಗುರುತಿಸಲಾಯಿತು.

6) ನಾಗವ್ವ ಕಿಮ್ಸ್ ಹಾಸ್ಪಿಟಲನಲ್ಲಿ ದಿನಾಂಕ: 19-04-2020 ರಂದು ಮತ್ತು ಆಕೆಯ ಮಗು ದಿನಾಂಕ: 18-04-2020 ತೀರಿಕೊಂಡ ಬಾಬತ್ತು ಈಗ ಓದಿ ಹೇಳಿದಂತೆ "ಈ ದಿವಸ _ _ _ _ _ _ _ _ _ ಕೇಳಿಗೊತ್ತಾಯಿತು" ಅಂತಾ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.-50 ಅಂತಾ ಗುರುತಿಸಲಾಯಿತು.

7) ಈ ಘಟನೆಯ ವಿಷಯ ಕುರಿತಂತೆ ನಾನು ಪೋಲಿಸರ ಮುಂದೆ ದಿನಾಂಕ: 16-06-2020 ರಂದು 3, 4, 5 ನೇ ಆರೋಪಿಯನ್ನು ಠಾಣೆಯಲ್ಲಿ ಗುರುತಿಸಿ ಈಗ ಓದಿ ಹೇಳಿದಂತೆ "ಈ ದಿವಸ _ _ _ _ _ _ _ _ ಗುರುತಿಸಿದ್ದು ಇರುತ್ತದೆ" ಅಂತಾ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.-51 ಅಂತಾ ಗುರುತಿಸಲಾಯಿತು.

8) ಪೋಲಿಸರು ಘಟನಾ ಸ್ಥಳದಿಂದ ಎರಡು 2 ಲೀಟರನ ಪ್ಲಾಸ್ಟಿಕ ಬಾಟಲಗಳು ಹಾಗೂ ಒಂದು ಬೆಂಕಿ ಪೊಟ್ಟಣ, ಒಂದು ಬಿಳಿ ಗುಲಾಬಿ ಬಣ್ಣದ ಸುಟ್ಟ ಸೀರೆ, ತಿಳಿ ಕೇಸರಿ ಬಣ್ಣದ ಸುಟ್ಟ ಲಂಗವನ್ನು ವಶಕ್ಕೆ ಪಡೆದುಕೊಂಡಿದ್ದರು ಅನ್ನುವುದು ಸರಿಯಲ್ಲ. ನಾನು ಘಟನೆಯನ್ನು ಪ್ರತ್ಯಕ್ಷ ನೋಡಿ ಎಲ್ಲ ವಿಷಯ ತಿಳಿದ್ದರು ಸಹ ನಾನು ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರವಾಗಿಃ ಇರುವುದಿಲ್ಲ ಅಂತಾ ಹೇಳಿರುತ್ತಾರೆ.
ಮರುವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.
13/09/2024

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು,
ವಿಜಯಪೂರ ಇವರ ನ್ಯಾಯಾಲಯ

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.17/2020
ಪಿ.ಡಬ್ಲೂ.19
ಸಿ.ಡಬ್ಲೂ.16

| | | |
|---|---|---|
| ಸಾಕ್ಷಿದಾರರ ಹೆಸರು | : | ಶಾಸಪ್ಪ ದೊಡ್ಡಮನಿ |
| ತಂದೆಯ ಹೆಸರು | : | ರಾಮಪ್ಪ |
| ವಯಸ್ಸು | : | 55 ವರ್ಷ. |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ದೇವಾಪುರ. |

ಇಂದು ದಿನಾಂಕ 13-09-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1) ನನಗೆ ಮೃತ ಚಾಸಾ-1 ನಾಗವ್ವ, ಚಾಸಾ-12 ಸರಸ್ವತಿ, ಚಾಸಾ-13 ಶಂಕರ ಇವರ ಪರಿಚಯ ಇಲ್ಲ. ಚಾಸಾ-14 ಲಕ್ಷ್ಮಿಬಾಯಿ ನನ್ನ ತಮ್ಮನ ಹೆಂಡತಿ. ಚಾಸಾ-15 ಶಂಕರಪ್ಪ ನನ್ನ ತಮ್ಮ. ಚಾಸಾ-17 ಪಾಂಡಪ್ಪ ನನ್ನ ತಮ್ಮ. ಚಾಸಾ-18 ರಿಂದ 22 ಇವರ ಪರಿಚಯ ಇದೆ. ನ್ಯಾಯಾಲಯದ ಮುಂದೆ ಇರುವ 1 ರಿಂದ 5 ನೇ ಆರೋಪಿತರ ಮತ್ತು ಈ ದಿನ ಗೈರು ಹಾಜರು ಉಳಿದಿರುವ 6 ನೇ ಆರೋಪಿತರ ಪರಿಚಯ ಇಲ್ಲ.

2) 1 ನೇ ಆರೋಪಿ ಮತ್ತು ಮೃತ ಚಾಸಾ-1 ಇವರ ಸಂಬಂಧ ನನಗೆ ಗೊತ್ತಿಲ್ಲ. ಚಾಸಾ-1 ನಾಗವ್ವ ಈಗ ಜೀವಂತ ಇಲ್ಲ. ಆಕೆ ಸತ್ತಿದ್ದಾಳೆ ಅಂತಾ ನನಗೆ ಗೊತ್ತಿದೆ. ಆಕೆ ಹೇಗೆ, ಎಲ್ಲಿ ತೀರಿಕೊಂಡಿದ್ದಾಳೆ ಅಂತಾ ನನಗೆ ಗೊತ್ತಿಲ್ಲ. ಆಕೆಯನ್ನು ಯಾರು, ಯಾವ ಉದ್ದೇಶಕ್ಕಾಗಿ ಕೊಲೆ ಮಾಡಿದ್ದಾರೆ ಅಂತಾ ಗೊತ್ತಿಲ್ಲ. ಎಲ್ಲಾ ಆರೋಪಿತರು ಪ್ಲಾಟ ಸಂಬಂಧ ಚಾಸಾ-1 ಇವರನ್ನು ಪೆಟ್ರೋಲ್ ಹಾಕಿ ಸುಟ್ಟಿದ್ದನ್ನು ನಾನು ನೋಡಿಲ್ಲ. ಪೊಲೀಸರಿಗೆ ಹೇಳಿಕೆ ಮತ್ತು ಮರು ಹೇಳಿಕೆಗಳನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ತಾನು ನೀಡಿದ ಹೇಳಿಕೆ ಮತ್ತು ಮರು ಹೇಳಿಕೆಗಳು ವಿರುದ್ದವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ:

1) ಮೃತ ನಾಗವ್ವ, ಪ್ರತಿಕ್ಷಾ, ಸರಸ್ವತಿ ಆಕೆಯ ಗಂಡ ಸೇರಿ ದೇವಲಾಪುರ ಗ್ರಾಮದಲ್ಲಿ ಈರಪ್ಪ ಚಲುವಾದಿ ಇವರ ಮನೆಯಲ್ಲಿ ಬಾಡಿಗೆಗೆ ಇದ್ದರು ಅಂದರೆ ಸರಿಯಲ್ಲ.

2) ನಾಗಮ್ಮ ಸುಭಾಶ ಅನ್ನುವ ವ್ಯಕ್ತಿಯ ಜೊತೆ ಆಗಿತ್ತು ಅನ್ನುವುದು ಗೊತ್ತಿಲ್ಲ. ಅವರು ಮಂಗಳೂರಿಗೆ ಹೋಗಿದ್ದರು ಅಂದರೆ ಗೊತ್ತಿಲ್ಲ. ಅಲ್ಲಿ ಅವರಿಬ್ಬರ ನಡುವೆ ವೈಮನಸ್ಸು ಬಂದು ಅವಳ ಗಂಡ ಮೊದಲನೇ ಮಗಳು ಲಕ್ಷ್ಮಿಯನ್ನು ಕರೆದುಕೊಂಡು ಆಕೆಯನ್ನು ಬಿಟ್ಟು ಹೊಗಿದ್ದ ಅಂದರೆ ಸರಿಯಲ್ಲ. ನಂತರ ಆಕೆಗೆ 6 ನೇ ಆರೋಪಿ ಜೊತೆ ಸಲುಗೆ ಬೆಳದಿತ್ತು ಅಂದರೆ ಸರಿಯಲ್ಲ. ಮೃತ ನಾಗವ್ವಳಿಗೆ 1 ನೇ ಆರೋಪಿ 2017 ನೇ ಸಾಲಿನಲ್ಲಿ ಕುಲ್ಯಾಳದಲ್ಲಿ ಒಂದು ಪ್ಲಾಟ ಇದೆ ಅದನ್ನು ತೆಗೆದುಕೊ ಅಂತಾ ಹೇಳಿದ್ದಳು ಅಂದರೆ ಗೊತ್ತಿಲ್ಲ. ಆ ಪ್ಲಾಟ ತೆಗೆದುಕೊಳ್ಳುವ ಸಂಬಂಧ ನಾಗಮ್ಮ 1 ನೇ ಆರೋಪಿಗೆ ರೂ. 60,000/-ಗಳನ್ನು ನೀಡಿದ್ದಳು ಅಂದರೆ ಸರಿಯಲ್ಲ. ನಂತರ ಚಾಸಾ-13 ಪ್ಲಾಟನ್ನು ನೋಡಿ ಇದು ಮುಳಗಡೆ ಪ್ರದೇಶದಲ್ಲಿ ಇರುವುದರಿಂದ ಅದನ್ನು ತೆಗೆದುಕೊಳ್ಳಲು ಆಗುವುದಿಲ್ಲ ಹಣವನ್ನು ವಾಪಸು ಪಡೆ ಅಂತಾ ಹೇಳಿದ್ದ ಅಂದರೆ ಸರಿಯಲ್ಲ. ಈ ಕಾರಣಕ್ಕಾಗಿ ಮೃತ ನಾಗಮ್ಮ 1 ನೇ ಆರೋಪಿ ಹತ್ತಿರ ಹಣವನ್ನು ವಾಪಸು ಕೆಳಿದ್ದಳು ಅಂದರೆ ಸರಿಯಲ್ಲ. ಆಗ 1 ನೇ ಆರೋಪಿ ಹಣವನ್ನು ವಾಪಸು ಕೊಡುವುದಿಲ್ಲ ಬೇಕಾದರೆ ಬೇರೆ ಪ್ಲಾಟ ಕೊಡಿಸುತ್ತೇನೆ ಅಂತಾ ಹೇಳಿದ್ದಳು ಅಂದರೆ ಸರಿಯಲ್ಲ. ಮುಂದುವರೆದು ಹಣವನ್ನು ಕೇಳಿ ಕಿರಿಕಿರಿ ಮಾಡಿದರೆ ಜೀವ ಸಹಿತ ಬಿಡುವುದಿಲ್ಲ

ಅಂತಾ ಜೀವ ಬೆದರಿಕೆ ಹಾಕಿದ್ದಳು ಅಂದರೆ ಸರಿಯಲ್ಲ. ಮುಂದೆ ನಾಗಮ್ಮ ಮತ್ತು ಚಾಸಾ-13 ಇವರಿಗೆ ಹಣವನ್ನು ವಾಪಸ್ಸು ಕೊಡು ಅಂತಾ ಗಲಗಲಿಗೆ ಹೋಗಿ ಕೇಳಿದಾಗ ಹಣವನ್ನು ವಾಪಸ್ಸು ಕೊಡುವುದಿಲ್ಲ ನೀನು ಏನೂ ಮಾಡಿಕೋತಿ ಮಾಡಿಕೋ ಅಂತಾ ಹೇಳಿದ್ದಳು ಅಂದರೆ ಸರಿಯಲ್ಲ. ಈ ವಿಷಯವನ್ನು ಮೃತ ನಾಗವ್ವ ಮತ್ತು ಚಾಸಾ-13 ಶಂಕರ ತಿಳಿಸಿದ್ದರು ಅಂದರೆ ಸರಿಯಲ್ಲ. ಆಗ ನಾಗವ್ವ ಠಾಣೆಯಲ್ಲಿ ಫಿರ್ಯಾದು ನೀಡುತ್ತೇನೆ ಅಂತಾ ಹೇಳಿದ್ದಳು ಅಂದರೆ ಸರಿಯಲ್ಲ. ಆಗ 1 ನೇ ಆರೋಪಿ ನೀನು ಬದುಕಿದ್ದರೆ ಫಿರ್ಯಾದು ಕೊಡುತ್ತಿಯಾ ಅಷ್ಟರೊಳಗೆ ನಿನ್ನನ್ನು ಖಲ್ಲಾಸ ಮಾಡುತ್ತೇವೆ ಅಂತಾ ಬೆದರಿಕೆ ಹಾಕಿದ್ದಳು ಅನ್ನುವ ವಿಷಯ ನಾಗವ್ವಳಿಂದ ಗೊತ್ತಾಗಿತ್ತು ಅಂದರೆ ಸರಿಯಲ್ಲ.

3) ನಾನು ದಿನಾಂಕ: 30-12-2019 ರಂದು ನನಗೆ ಚಾಸಾ-13 ತನ್ನ ಮಗಳಾದ ಪ್ರತೀಕ್ಷಾ ಇವಳ ಹುಟ್ಟು ಹಬ್ಬದ ಕಾರ್ಯಕ್ರಮಕ್ಕೆ ಬರುವಂತೆ ತಿಳಿಸಿದ್ದ, ಆ ಪ್ರಕಾರ ನಾವು ಸಾಯಂಕಾಲ ಸುಮಾರಿಗೆ ನಮ್ಮ ಮನೆಯ ಪಕ್ಕದಲ್ಲಿರುವ ದುರ್ಗವ್ವನ ಗುಡಿಯ ಮುಂದೆ ನಾನು ಮತ್ತು ನನ್ನ ತಮ್ಮ ಪಾಂಡಪ್ಪ ದೊಡ್ಡಮನಿ ಕೂಡಿ ಹೊರಟಿದ್ದೇವು, ಇನ್ನೂ ಸಮಯ ಇದ್ದರಿಂದ ದುರ್ಗವ್ವನ ಗುಡಿಯ ಮುಂದೆ ಮಾತನಾಡುತ್ತಾ ಕುಳಿತಿದ್ದೇವು ಅಂದರೆ ಸರಿಯಲ್ಲ. ಆಗ ಇಬ್ಬರು ಹೆಂಗಸರು ಮತ್ತು ನಾಲ್ಕು ಜನ ಗಂಡಸು ನಾಗವ್ವನ ಮನೆಗೆ ಕಡೆಗೆ ಹೋದರು, ನಾವು ಅವರು ಸಂಬಂಧಿಕರು ಹುಟ್ಟು ಹಬ್ಬಕ್ಕೆ ಬಂದಿರಬಹುದು ಅಂತಾ ತಿಳಿದುಕೊಂಡಿದ್ದೇವು ಅಂದರೆ ಸರಿಯಲ್ಲ. ಅವರು ಯಾರು ಅಂತಾ ನಮಗೆ ಗೊತ್ತಿರಲಿಲ್ಲ. ಮುಂದೆ ಸಂಜೆ 6.30 ಸಮಯದಲ್ಲಿ ಚಾಸಾ-1 ಇವರ ಮನೆಯಲ್ಲಿ ಕಿರಿಚಾಡುವ ಶಬ್ದ ಕೇಳಿತ್ತು ಅಂದರೆ ಸರಿಯಲ್ಲ. ಅಲ್ಲಿ ನಾವು ಹೋಗುವಷ್ಟರದಲ್ಲಿ ನಾಗವ್ವಳ ಮನೆಯಿಂದ 5 ಜನ ಓಡಿ ಹೋದರು ಅಂದರೆ ಸರಿಯಲ್ಲ. ಒಳಗಿನಿಂದ ಚಾಸಾ-1 ಮತ್ತು 6 ನೇ ಆರೋಪಿ ಬೆಂಕಿ ಹತ್ತಿಕೊಂಡು ಚೀರಾಡುತ್ತಾ ಹೊರಗಡೆ ಬಂದಿದ್ದರು ಅಂದರೆ ಸರಿಯಲ್ಲ.

ಚಾಸಾ-1 ಇವರಿಗೆ ಬೆಂಕಿ ಹತ್ತಿದ್ದರಿಂದ ಮೈಮೇಲೆ ಇದ್ದ ಸೀರೆ, ಜಂಪರ, ಫರಕಾರ ಸುಟ್ಟಿ ಹೋಗಿತ್ತು ಅಂದರೆ ಸರಿಯಲ್ಲ. ಮುಂದೆ ನಾವು ಎಲ್ಲರೂ ಸೇರಿ ಚಾಸಾ-1 ಇವರನ್ನು ದುರ್ಗವ್ವನ ಗುಡಿಯ ಮುಂದೆ ಹೋಗಿದ್ದೆವು ಅಂದರೆ ಸರಿಯಲ್ಲ. 6 ನೇ ಆರೋಪಿತ ಕಾಲಿಗೆ ಸ್ವಲ್ಪ ಬೆಂಕಿ ಹತ್ತಿತ್ತು ಆತ ಓಡಿ ಹೋದ ಅಂದರೆ ಸರಿಯಲ್ಲ. ಚಾಸಾ-1 ಇವರಿಗೆ ಎದೆಯಿಂದ ಕೆಳಗೆ, ಕೈಗೆ, ಕಾಲಿಗೆ ಸುಟ್ಟು ಗಾಯಗಳನ್ನು ಆಗಿದ್ದು, ನಾನು ನಾಗಮ್ಮಳನ್ನು ವಿಚಾರಿಸಲಾಗಿ ಚಾಸಾ-12 ಚೂಡಾ ಮಾಡಲು ಬುಟ್ಟಿ ತರಲು ಹೋದಾಗ 1 ರಿಂದ 6 ನೇ ಆರೋಪಿ ಒಮ್ಮೆಲೆ ಮನೆಗೆ ಬಂದರು ಬಂದು 6 ನೇ ಆರೋಪಿ ನೀನು ನನ್ನ ಜೊತೆ ಬಾ ಅಂತಾ ಕರೆದಿದ್ದ ಆಗ 1 ಮತ್ತು 2 ನೇ ಆರೋಪಿತರು ನೀನು ಆರೋಪಿ ನಂ. 6 ರ ಜೊತೆ ಹೋಗು ಚಾಸಾ-13 ಇವರನ್ನು ಬಿಟ್ಟು ಬಿಡು ನೀನು ಪ್ಲಾಟಿಗೆ ಕೊಟ್ಟ ದೊಡ್ಡನ್ನು ವಾಪಸ್ಸು ಕೊಡುತ್ತೇವೆ ಅಂದರು ಆಗ ನಾಗವ್ವ ಚಾಸಾ-13 ಇವರನ್ನು ಬಿಟ್ಟು ಬರುವುದಿಲ್ಲ ನೀವು ದುಡ್ಡು ಕೊಡದಿದ್ದರೇ ಚಾಸಾ-13 ರಿಂದ ಹೊಡಿಸುತ್ತೇನೆ ಅಂತಾ ಹೇಳಿದ್ದಳು ಆಗ ಅವರ ನಡುವೆ ಬಾಯಿ ಬಾಯಿ ನಡೆದಿತ್ತು ಆಗ 1 ಮತ್ತು 2 ನೇ ಆರೋಪಿ ಈಕೆ ನಮ್ಮ ಮಾತು ಕೇಳುವುದಿಲ್ಲ ಹಾದರ ಮಾಡುವುದು ಬಿಡುವುದಿಲ್ಲ ಇಕೆಯನ್ನು ಖಲಾಸ ಮಾಡಿ ಬೀಡೋಣ ಮುಂದೆ ಯಾರು ದುಡ್ಡು ಕೇಳುವುದಿಲ್ಲ ಅಂತಾ ಹೇಳಿದಾಗ ಆಗ 3 ರಿಂದ 5 ನೇ ಆರೋಪಿತರು ನಾಗವ್ವಳನ್ನು ಗಟ್ಟಿಯಾಗಿ ಹಿಡಿದಿದ್ದರು ಮತ್ತು 1 ಮತ್ತು 2 ನೇ ಆರೋಪಿತರು ತಲಾ 2 ಲಿಟರ್ ಬಾಟಲಿಯಲ್ಲಿ ಇದ್ದ 4 ಲಿಟರ್ ಪೆಟ್ರೋಲನ್ನು ತನ್ನ ಮೇಲೆ ಸುರಿದಿದ್ದರು, ನಂತರ ಅವರು 6 ನೇ ಆರೋಪಿತನಿಗೆ ನಿನ್ನ ಜೊತೆ ಬಂದರೆ ಇವಳನ್ನು ಕರೆದುಕೊಂಡು ಬಾ ಇಲ್ಲದಿದ್ದರೆ ಬೆಂಕಿ ಹಚ್ಚಿಸುಟ್ಟು ಬಿಡು ಅಂತಾ ಹೇಳಿ ಮನೆ ಹೊರಗೆಡೆ ನಿಂತಿದ್ದರು, ನಂತರ 6 ನೇ ಆರೋಪಿ ಕೊನೆಯ ಸಲು ಕೇಳುತ್ತೇನೆ ನೀನು ನನ್ನ ಜೊತೆ ಬಂದು ಬಿಡು ಅಂತಾ ಹೇಳಿದಾಗ ನಾಗವ್ವ ಬರುವುದಿಲ್ಲ ಅಂತಾ ಹೇಳಿದ್ದಕ್ಕೆ ಆತ ಸಿಟ್ಟು ಮಾಡಿಕೊಂಡು ತನ್ನ ಹತ್ತಿರ

ಇದ್ದ ಬೆಂಕಿ ಪೊಟ್ಟಣದಿಂದ ಕಡ್ಡಿ ಗೀರಿ ಬೆಂಕಿ ಹಚ್ಚಿದ್ದ ಅದು ಆತನಿಗೂ ಕೂಡಾ ಹತ್ತಿತ್ತು, ನಾವು ಚೀರಾಡುತ್ತಾ ಹೊರಗಡೆ ಬಂದೆವು ನೀವು ಎಲ್ಲಾ ಬಂದು ನಮ್ಮ ಪ್ರಾಣ ಉಳಿಸಿದ್ದಿರಿ ಅಂತಾ ಹೇಳಿದ್ದಳು ಅಂದರೆ ಸರಿಯಲ್ಲ. ನಂತರ ಅವಳನ್ನು 108 ಅಂಬ್ಯುಲನ್ಸನಲ್ಲಿ ವಿಜಯಪುರದ ವೇದಾಂತ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಅಂತಾ ಕೇಳಿ ಗೊತ್ತಾಯಿತು ಅಂದರೆ ಸರಿಯಲ್ಲ. ಈ ಕುರಿತಂತೆ ಈಗ ಓದಿ ಹೇಳಿದಂತೆ "ನಾನು ಮೇಲಿನ ವಿಳಾಸದ_ _ _ _ _ _ ಕೇಳಿ ಗೊತ್ತಾಯಿತು" ಅಂತಾ ದಿನಾಂಕ: 01-01-2020 ರಂದು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೆ ಅಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿ.ಪಿ.-52 ಅಂತಾ ಗುರುತಿಸಲಾಯಿತು.

4) ಈ ಘಟನೆಯ ವಿಷಯ ಕುರಿತಂತೆ ನಾನು ಪೋಲಿಸರ ಮುಂದೆ ದಿನಾಂಕ: 12-01-2020 ರಂದು ಈಗ ಓದಿ ಹೇಳಿದಂತೆ "ನಾನು ದಿನಾಂಕ: 01-01-2020 _ _ _ _ _ _ _ _ _ ಕೇಳಿ ತಿಳಿದುಕೊಂಡೆನು" ಅಂತಾ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.-53 ಅಂತಾ ಗುರುತಿಸಲಾಯಿತು.

5) ಈ ಘಟನೆಯ ವಿಷಯ ಕುರಿತಂತೆ ನಾನು ಪೋಲಿಸರ ಮುಂದೆ ದಿನಾಂಕ: 28-03-2020 ರಂದು 6 ನೇ ಆರೋಪಿಯನ್ನು ಠಾಣೆಯಲ್ಲಿ ಗುರುತಿಸಿ ಈಗ ಓದಿ ಹೇಳಿದಂತೆ "ಈ ದಿವಸ _ _ _ _ _ _ _ _ _ ಕೇಳಿಗೊತ್ತಾಯಿತು" ಅಂತಾ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.-54 ಅಂತಾ ಗುರುತಿಸಲಾಯಿತು.

6) ನಾಗವ್ವ ಕಿಮ್ಸ ಹಾಸ್ಪಿಟಲನಲ್ಲಿ ದಿನಾಂಕ: 19-04-2020 ರಂದು ಮತ್ತು ಆಕೆಯ ಮಗು ದಿನಾಂಕ: 18-04-2020 ತೀರಿಕೊಂಡ ಬಾಬತ್ತು ಈಗ ಓದಿ ಹೇಳಿದಂತೆ "ಈ ದಿವಸ _ _ _ _ _ _ _ _ _ ಕೇಳಿಗೊತ್ತಾಯಿತು" ಅಂತಾ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.-55 ಅಂತಾ ಗುರುತಿಸಲಾಯಿತು.

7) ಈ ಘಟನೆಯ ವಿಷಯ ಕುರಿತಂತೆ ನಾನು ಪೋಲಿಸರ ಮುಂದೆ ದಿನಾಂಕ: 16-06-2020 ರಂದು 3, 4, 5 ನೇ ಆರೋಪಿಯನ್ನು ಠಾಣೆಯಲ್ಲಿ ಗುರುತಿಸಿ ಈಗ ಓದಿ ಹೇಳಿದಂತೆ "ಈ ದಿವಸ _ _ _ _ _ _ _ _ _ ಗುರುತಿಸಿದ್ದು ಇರುತ್ತದೆ" ಅಂತಾ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.-56 ಅಂತಾ ಗುರುತಿಸಲಾಯಿತು.

8) ಪೋಲಿಸರು ಘಟನಾ ಸ್ಥಳದಿಂದ ಎರಡು 2 ಲೀಟರನ ಪ್ಲಾಸ್ಟಿಕ ಬಾಟಲಗಳು ಹಾಗೂ ಒಂದು ಬೆಂಕಿ ಪೊಟ್ಟಣ, ಒಂದು ಬಿಳಿ ಗುಲಾಬಿ ಬಣ್ಣದ ಸುಟ್ಟ ಸೀರೆ, ತಿಳಿ ಕೇಸರಿ ಬಣ್ಣದ ಸುಟ್ಟ ಲಂಗವನ್ನು ವಶಕ್ಕೆ ಪಡೆದುಕೊಂಡಿದ್ದರು ಅನ್ನುವುದು ಸರಿಯಲ್ಲ. ನಾನು ಘಟನೆಯನ್ನು ಪ್ರತ್ಯಕ್ಷ ನೋಡಿ ಎಲ್ಲ ವಿಷಯ ತಿಳಿದ್ದರು ಸಹ ನಾನು ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರವಾಗಿಃ ಇರುವುದಿಲ್ಲ ಅಂತಾ ಹೇಳಿರುತ್ತಾರೆ.
ಮರುವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.
13/09/2024

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು,
ವಿಜಯಪೂರ ಇವರ ನ್ಯಾಯಾಲಯ

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.17/2020
ಪಿ.ಡಬ್ಲೂ.20
ಸಿ.ಡಬ್ಲೂ.19

ಸಾಕ್ಷಿದಾರರ ಹೆಸರು : ಭೀಮನಗೌಡ ಪಾಟೀಲ
ತಂದೆಯ ಹೆಸರು : ಹನಮಂತಗೌಡ
ವಯಸ್ಸು : 46 ವರ್ಷ.
ಉದ್ಯೋಗ : ಒಕ್ಕಲುತನ
ವಾಸಸ್ಥಳ : ದೇವಾಪುರ.

ಇಂದು ದಿನಾಂಕ 13-09-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1) ನನಗೆ ಮೃತ ಚಾಸಾ-1 ನಾಗವ್ವ, ಚಾಸಾ-12 ಸರಸ್ವತಿ, ಚಾಸಾ-13 ಶಂಕರ ಇವರ ಪರಿಚಯ ಇಲ್ಲ. ಚಾಸಾ-20 ರಿಂದ 22 ಪರಿಚಯ ಇದ್ದಾರೆ. ದೇವಾಪುರದಲ್ಲಿ ನನ್ನ ಜಮೀನು ಊರಿಗೆ ಹತ್ತಿಕೊಂಡು ಇದೆ. ಈಗ್ಗೆ 5 ವರ್ಷಗಳ ಹಿಂದೆ ಜಮೀನಿನಲ್ಲಿ ನಾನು ಕಬ್ಬು ಬೆಳೆ ಬೆಳೆದಿದ್ದೆ.

2) ಈಗ್ಗೆ 4-5 ವರ್ಷಗಳ ಹಿಂದೆ ನಮ್ಮ ಜಮೀನಿನಲ್ಲಿ ಯಾರೊ ಒಬ್ಬ ಬೆಂಕಿ ಹಚ್ಚಿಕೊಂಡು ಬಿದಿದ್ದಾನೆ ಅಂತಾ ಊರಿನವರು ಹೇಳಿದ್ದರು, ಆದರೆ ನಾನು ಅವನನ್ನು ನೋಡಿಲ್ಲ. ನಾನು ಹೋಗುವಷ್ಟರಲ್ಲಿ ಆತನನ್ನು ಅಂಬುಲೆನ್ಸನಲ್ಲಿ ಹಾಕಿಕೊಂಡು ಹೋಗಿದ್ದರು. ನನ್ನ ಹೊಲದಲ್ಲಿ ಬಿದ್ದ ವ್ಯಕ್ತಿ ಚಾಸಾ-1 ಇವರನ್ನು ಬೆಂಕಿ ಹಚ್ಚಿ ಕೊಲೆಯ ಮಾಡುವ ಪ್ರಯತ್ನ ಮಾಡಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಅವನ ಹೆಸರು ನನಗೆ ಗೊತ್ತಿಲ್ಲ. ಪೊಲೀಸರಿಗೆ ಹೇಳಿಕೆ ಮತ್ತು ಮರು ಹೇಳಿಕೆಗಳನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ತಾನು ನೀಡಿದ ಹೇಳಿಕೆ ಮತ್ತು ಮರು ಹೇಳಿಕೆಗಳು ವಿರುದ್ಧವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ:

1) ಚಾಸಾ-1 ನಮ್ಮ ಊರಿನಲ್ಲಿ ಬಾಡಿಗೆ ತರಿಕ ವಾಸ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ದಿಃ 30.12.2019 ರಂದು ಸಂಜೆ ನಾನು ನಮ್ಮ ಮನೆಯಲ್ಲಿದ್ದಾಗ ಚಾಸಾ-1 ಇವರನ್ನು ಯಾರೊ ಒಬ್ಬ ಅಪರಚಿತ ವ್ಯಕ್ತಿ ಬಂದು ಬೆಂಕಿ ಹಚ್ಚಿ ಕೊಲೆ ಮಾಡಲು ಪ್ರಯತ್ನ ಮಾಡಿದ್ದ, ಆತನಿಗೂ ಬೆಂಕಿ ಹತ್ತಿರುತ್ತದೆ, ಆತ ನಮ್ಮ ಕಬ್ಬಿನ ತೋಟದಲ್ಲಿ ಇದ್ದು, ಚಿರಾಡುತ್ತಿದ್ದಾನೆ ಅಂತಾ ಸುದ್ದಿ ಕೇಳಿ ದುರ್ಗವ್ವನ ಗುಡಿಗೆ ಹೊಂದಿಕೊಂಡಿರುವ ನಮ್ಮ ಕಬ್ಬಿನ ತೋಟಕ್ಕೆ ಹೋಗಿ ನೋಡಿದ್ದೆ, ಅಲ್ಲಿ ಒಬ್ಬ ಅಪರಿಚಿತ ವ್ಯಕ್ತಿ ಚಿರಾಡುತ್ತಾ ಬಿದಿದ್ದ ಅಂದರೆ ಸರಿಯಲ್ಲ. ಆತನ ಕಾಲಿಗೆ ಕೈಯಿಗೆ ಬಿಂಕಿ ಹತ್ತಿತ್ತು, ಅಲ್ಲಿ ನಮ್ಮ ಊರಿನ ಅನೇಕ ಜನರು ಸೇರಿದ್ದರು, ಆತನ ಹೆಸರನ್ನು ಕೇಳಲಾಗಿ ನಾರಾಯಣಸ್ವಾಮಿ ಸಾಃ ಕೋಲಾರ ಜಿಲ್ಲೆ ಅಂತಾ ಹೇಳಿದ್ದ ಅಂದರೆ ಸರಿಯಲ್ಲ. (6 ನೇ ಆರೋಪಿ ಈ ದಿನ ಗೈರ ಹಾಜರು ಉಳಿದಿದ್ದು, ಆತನ ಗುರುತನ್ನು ವಿವಾದ ಮಾಡವುದಿಲ್ಲ ಅಂತಾ ವಕೀಲರು ನುಡಿದಿರುತ್ತಾರೆ) ನಾನು ಆತನನ್ನು ಚಾಸಾ-1 ಇವರನ್ನು ಏಕೆ ಕೊಲೆ ಮಾಡಲು ಪ್ರಯತ್ನಿಸಿದ್ದೆ ಅಂತಾ ಕೇಳಲಾಗಿ ಆಕೆ ತನ್ನ ಹೆಂಡತಿ ಇದ್ದು, ಅಕೆಯನ್ನ ಚಾಸಾ-13 ಶಂಕರ ಓಡಿಸಿಕೊಂಡು ಬಂದಿದ್ದಾನೆ, ತನ್ನೊಂದಿಗೆ ಬಾ ಅಂತಾ ಕರೆದರೂ ಕೂಡ ಬರಲಾರದಕ್ಕೆ ಸಿಟ್ಟಾಗಿ ನಾನು ಮತ್ತು ಗಲಗಲಿಯ 5 ಜನರು ಸೇರಿ ಕೊಲೆ ಮಾಡಬೇಕೆಂದು ಉಪಚಾರ ಮಾಡಿ ಪೆಟ್ರೊಲ್ ಹಾಕಿ ಸುಟ್ಟಿರುತ್ತೇವೆ, ಆ ಸಮಯದಲ್ಲಿ ನನಗೂ ಬೆಂಕಿ ಹತ್ತಿತ್ತು ಅಂತಾ ಹೇಳಿದ್ದ ಅಂದರೆ ಸರಿಯಲ್ಲ. ಮುಂದೆ ಪೊಲೀಸರು ಬಂದು 108 ಅಂಬುಲೇನ್ಸನ್ನು ಕರೆಯಿಸಿ ಚಾಸಾ-20, 21, 22 ಆತನನ್ನು ಅಂಬುಲೆನ್ಸನಲ್ಲಿ ಎತ್ತಿಹಾಕಿ ಕಳುಹಿಸಿದ್ದರು ಅಂದರೆ ಸರಿಯಲ್ಲ. ಚಾಸಾ-1 ಇವರನ್ನು ಆಸ್ಪತ್ರೆ ದಾಖಲಿಸಿದ ಸುದ್ದಿ ಕೇಳಿ ಗೊತ್ತಾಯಿತು ಅಂದರೆ ಸರಿಯಲ್ಲ. ಮುಂದೆ ಚಾಸಾ-1 ಆಸ್ಪತ್ರೆಯಲ್ಲಿ ಉಪಚಾರ ಹೊಂದಿತ್ತಿರಬೇಕಾದರೆ ದೂರು ಕೊಟ್ಟ ವಿಷಯ ಕೇಳಿ ಗೊತ್ತಾಯಿತು

ಅಂದರೆ ಸರಿಯಲ್ಲ. ಆ ದಿನ ನನ್ನ ತೋಟದಲ್ಲಿ ಬಿದಿದ್ದ ವ್ಯಕ್ತಿ 6 ನೇ ಆರೋಪಿ ನಾರಾಯಣಸ್ವಾಮಿ ಆಗಿರುತ್ತಾನೆ ಅಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ದಿಃ 01.01.2020 ರಂದು ಈಗ ಓದಿ ಹೇಳಿದಂತೆ "ದಿಃ30.12.2019 --------------ನೋಡಿದರೆ ಗುರುತಿಸುತ್ತೇನೆ" ಅಂತಾ ಹೇಳಿಕೆ ನೀಡಿದ್ದೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-57 ಅಂತಾ ಗುರುತಿಸಲಾಯಿತು.

2) ಈ ಘಟನೆಯ ವಿಷಯ ಕುರಿತಂತೆ ನಾನು ಪೋಲಿಸರ ಮುಂದೆ ದಿನಾಂಕ: 28-03-2020 ರಂದು 6 ನೇ ಆರೋಪಿಯನ್ನು ಠಾಣೆಯಲ್ಲಿ ಗುರುತಿಸಿ ಈಗ ಓದಿ ಹೇಳಿದಂತೆ "ಈ ದಿವಸ _ _ _ _ _ _ _ _ _ ಕೇಳಿಗೊತ್ತಾಯಿತು" ಅಂತಾ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.-58 ಅಂತಾ ಗುರುತಿಸಲಾಯಿತು.

3) ನಾಗವ್ವ ಕಿಮ್ಸ ಹಾಸ್ಪಿಟಲನಲ್ಲಿ ದಿನಾಂಕ: 19-04-2020 ರಂದು ಮತ್ತು ಆಕೆಯ ಮಗು ದಿನಾಂಕ: 18-04-2020 ತೀರಿಕೊಂಡ ಬಾಬತ್ತು ಈಗ ಓದಿ ಹೇಳಿದಂತೆ "ಈ ದಿವಸ _ _ _ _ _ _ _ _ _ ಕೇಳಿಗೊತ್ತಾಯಿತು" ಅಂತಾ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.-59 ಅಂತಾ ಗುರುತಿಸಲಾಯಿತು.

4) ಘಟನೆಯ ವಿಷಯ ಗೊತ್ತಿದ್ದರೂ ಸಹ ಸಹ ನಾನು ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರವಾಗಿಃ ಇರುವುದಿಲ್ಲ ಅಂತಾ ಹೇಳಿರುತ್ತಾರೆ.
ಮರುವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.
13/09/2024

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು,
ವಿಜಯಪೂರ ಇವರ ನ್ಯಾಯಾಲಯ

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.17/2020
ಪಿ.ಡಬ್ಲೂ.21
ಸಿ.ಡಬ್ಲೂ.20

ಸಾಕ್ಷಿದಾರರ ಹೆಸರು : ಗೈಬುಸಾಬ ನಧಾಫ್
ತಂದೆಯ ಹೆಸರು : ಮಲ್ಲಿಕಸಾಬ
ವಯಸ್ಸು : 45 ವರ್ಷ.
ಉದ್ಯೋಗ : ಕೂಲಿ
ವಾಸಸ್ಥಳ : ದೇವಾಪುರ.

ಇಂದು ದಿನಾಂಕ 13-09-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1) ನನಗೆ ಮೃತ ಚಾಸಾ-1 ನಾಗವ್ವ, ಚಾಸಾ-12 ಸರಸ್ವತಿ, ಚಾಸಾ-13 ಶಂಕರ ಇವರ ಪರಿಚಯ ಇಲ್ಲ. ಚಾಸಾ-19, 21 ಮತ್ತು 22 ಪರಿಚಯ ಇದ್ದಾರೆ.

2) ಈಗ್ಗೆ 4-5 ವರ್ಷಗಳ ಹಿಂದೆ ಮಮದಪೂರ ದಾರಿ ಮೇಲೆ ಅಂಬುಲೆನ್ಸ ಬಂದಿತ್ತು, ನಾನು ಅದನ್ನು ನೋಡಿದ್ದೆ. ಚಾಸಾ-19 ಇವರು ಜಮೀನಿನಲ್ಲಿ ಯಾರೊ ಒಬ್ಬ ಬೆಂಕಿ ಹಚ್ಚಿಕೊಂಡು ಬಿದಿದ್ದ ವ್ಯಕ್ತಿಯನ್ನುನಾನು ನೋಡಿಲ್ಲ, ಆತನನ್ನು ಅಂಬುಲೆನ್ಸಗೆ ಹಾಕಿಲ್ಲ. ಆತನನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಪೊಲೀಸರಿಗೆ ಹೇಳಿಕೆ ಮತ್ತು ಮರು ಹೇಳಿಕೆಗಳನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ತಾನು ನೀಡಿದ ಹೇಳಿಕೆ ಮತ್ತು ಮರು ಹೇಳಿಕೆಗಳು ವಿರುದ್ಧವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ:

1) ಚಾಸಾ-1 ನಮ್ಮ ಊರಿನಲ್ಲಿ ಬಾಡಿಗೆ ತರಿಕ ವಾಸ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ದಿಃ 30.12.2019 ರಂದು ಸಂಜೆ ನಾನು ನಮ್ಮ

ಮನೆಯಲ್ಲಿದ್ದಾಗ ಚಾಸಾ-1 ಇವರನ್ನು ಯಾರೊ ಒಬ್ಬ ಅಪರಿಚಿತ ವ್ಯಕ್ತಿ ಬಂದು ಬೆಂಕಿ ಹಚ್ಚಿ ಕೊಲೆ ಮಾಡಲು ಪ್ರಯತ್ನ ಮಾಡಿದ್ದು, ಆತನಿಗೂ ಬೆಂಕಿ ಹತ್ತಿರುತ್ತದೆ, ಆತ ಚಾಸಾ-19 ಇವರ ಕಬ್ಬಿನ ತೋಟದಲ್ಲಿ ಇದ್ದು, ಚಿರಾಡುತ್ತಿದ್ದಾನೆ ಅಂತಾ ಸುದ್ದಿ ಕೇಳಿ ದುರ್ಗವ್ವನ ಗುಡಿಗೆ ಹೊಂದಿಕೊಂಡಿರುವ ಕಬ್ಬಿನ ತೋಟಕ್ಕೆ ಹೋಗಿ ನೋಡಿದ್ದೆ, ಅಲ್ಲಿ ಒಬ್ಬ ಅಪರಿಚಿತ ವ್ಯಕ್ತಿ ಚಿರಾಡುತ್ತಾ ಬಿದಿದ್ದ ಅಂದರೆ ಸರಿಯಲ್ಲ. ಆತನ ಕಾಲಿಗೆ ಕೈಯಿಗೆ ಬಿಂಕಿ ಹತ್ತಿತ್ತು, ಅಲ್ಲಿ ನಮ್ಮ ಊರಿನ ಅನೇಕ ಜನರು ಸೇರಿದ್ದರು, ಆತನ ಹೆಸರನ್ನು ಕೇಳಲಾಗಿ ನಾರಾಯಣಸ್ವಾಮಿ ಸಾಃ ಕೋಲಾರ ಜಿಲ್ಲೆ ಅಂತಾ ಹೇಳಿದ್ದ ಅಂದರೆ ಸರಿಯಲ್ಲ. (6 ನೇ ಆರೋಪಿ ಈ ದಿನ ಗೈರ ಹಾಜರು ಉಳಿದಿದ್ದು, ಆತನ ಗುರುತನ್ನು ವಿವಾದ ಮಾಡವುದಿಲ್ಲ ಅಂತಾ ವಕೀಲರು ನುಡಿದಿರುತ್ತಾರೆ) ನಾನು ಆತನನ್ನು ಚಾಸಾ-1 ಇವರನ್ನು ಏಕೆ ಕೊಲೆ ಮಾಡಲು ಪ್ರಯತ್ನಿಸಿದ್ದೆ ಅಂತಾ ಕೇಳಲಾಗಿ ಆಕೆ ತನ್ನ ಹೆಂಡತಿ ಇದ್ದು, ಅಕೆಯನ್ನ ಚಾಸಾ-13 ಶಂಕರ ಓಡಿಸಿಕೊಂಡು ಬಂದಿದ್ದಾನೆ, ತನ್ನೊಂದಿಗೆ ಬಾ ಅಂತಾ ಕರೆದರೂ ಕೂಡ ಬರಲಾರದಕ್ಕೆ ಸಿಟ್ಟಾಗಿ ನಾನು ಮತ್ತು ಗಲಗಲಿಯ 5 ಜನರು ಸೇರಿ ಕೊಲೆ ಮಾಡಬೇಕೆಂದು ಉಪಚಾರ ಮಾಡಿ ಪೆಟ್ರೊಲ್ ಹಾಕಿ ಸುಟ್ಟಿರುತ್ತೇವೆ, ಆ ಸಮಯದಲ್ಲಿ ನನಗೂ ಬೆಂಕಿ ಹತ್ತಿತ್ತು ಅಂತಾ ಹೇಳಿದ್ದ ಅಂದರೆ ಸರಿಯಲ್ಲ. ಮುಂದೆ ಪೊಲೀಸರು ಬಂದು 108 ಅಂಬುಲೇನ್ಸನ್ನು ಕರೆಯಿಸಿದಾಗ ನಾನು, ಚಾಸಾ-21, 22 ಆತನನ್ನು ಅಂಬುಲೆನ್ಸನಲ್ಲಿ ಎತ್ತಿಹಾಕಿ ಕಳುಹಿಸಿದ್ದೇವು ಅಂದರೆ ಸರಿಯಲ್ಲ. ಚಾಸಾ-1 ಇವರನ್ನು ಆಸ್ಪತ್ರೆ ದಾಖಲಿಸಿದ ಸುದ್ದಿ ಕೇಳಿ ಗೊತ್ತಾಯಿತು ಅಂದರೆ ಸರಿಯಲ್ಲ. ಮುಂದೆ ಚಾಸಾ-1 ಆಸ್ಪತ್ರೆಯಲ್ಲಿ ಉಪಚಾರ ಹೊಂದಿತ್ತಿರಬೇಕಾದರೆ ದೂರು ಕೊಟ್ಟ ವಿಷಯ ಕೇಳಿ ಗೊತ್ತಾಯಿತು ಅಂದರೆ ಸರಿಯಲ್ಲ. ಆ ದಿನ ಚಾಸಾ-19 ಇವರ ತೋಟದಲ್ಲಿ ಬಿದಿದ್ದ ವ್ಯಕ್ತಿ 6 ನೇ ಆರೋಪಿ ನಾರಾಯಣಸ್ವಾಮಿ ಆಗಿರುತ್ತಾನೆ ಅಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ದಿಃ 01.01.2020 ರಂದು ಈಗ ಓದಿ

ಹೇಳಿದಂತೆ "ದಿಃ30.12.2019 --------------ನೋಡಿದರೆ ಗುರುತಿಸುತ್ತೇನೆ" ಅಂತಾ ಹೇಳಿಕೆ ನೀಡಿದ್ದೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-60 ಅಂತಾ ಗುರುತಿಸಲಾಯಿತು.

2) ಈ ಘಟನೆಯ ವಿಷಯ ಕುರಿತಂತೆ ನಾನು ಪೋಲಿಸರ ಮುಂದೆ ದಿನಾಂಕ: 28-03-2020 ರಂದು 6 ನೇ ಆರೋಪಿಯನ್ನು ಠಾಣೆಯಲ್ಲಿ ಗುರುತಿಸಿ ಈಗ ಓದಿ ಹೇಳಿದಂತೆ "ಈ ದಿವಸ _ _ _ _ _ _ _ _ _ ಕೇಳಿಗೊತ್ತಾಯಿತು" ಅಂತಾ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.-61 ಅಂತಾ ಗುರುತಿಸಲಾಯಿತು.

3) ನಾಗವ್ವ ಕಿಮ್ಸ ಹಾಸ್ಪಿಟಲನಲ್ಲಿ ದಿನಾಂಕ: 19-04-2020 ರಂದು ಮತ್ತು ಆಕೆಯ ಮಗು ದಿನಾಂಕ: 18-04-2020 ತೀರಿಕೊಂಡ ಬಾಬತ್ತು ಈಗ ಓದಿ ಹೇಳಿದಂತೆ "ಈ ದಿವಸ _ _ _ _ _ _ _ _ _ ಕೇಳಿಗೊತ್ತಾಯಿತು" ಅಂತಾ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.-62 ಅಂತಾ ಗುರುತಿಸಲಾಯಿತು.

4) ಘಟನೆಯ ವಿಷಯ ಗೊತ್ತಿದ್ದರೂ ಸಹ ಮತ್ತು 6 ನೇ ಆರೋಪಿಯನ್ನು ಅಂಬುಲೆನ್ಸಗೆ ಎತ್ತಿ ಹಾಕಿದ್ದರೂ ಸಹ ನಾನು ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರವಾಗಿಃ ಇರುವುದಿಲ್ಲ ಅಂತಾ ಹೇಳಿರುತ್ತಾರೆ.
ಮರುವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.

13/09/2024